ಸಿ ಸಿ 504 /2025 ಪಿ.ಡಬ್ಲ್ಯೂ - 1 ಬಂಗಾರಪ್ಪ ಲಗಮಪ್ಪ ಪೂಜೇರಿ

( ದಿನಾಂಕ 06-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು : ಆರೋಪಿ ಪರ ಶ್ರೀ ಬಿ ಎಂ ಜೆ ವಕಿಲರಿಂದ -**

1. ನಾನು ಬಿಎ ಬಿ ಎಡ್ ಓದಿರುತ್ತೇನೆ. ನಾನು ಕೃಷಿ ಮಾಡುತ್ತೇನೆ. ನನ್ನ ಸ್ವಂತ ಊರು ಚಿಕ್ಕೋಡಿ ತಾಲೂಕಿನ ವಿಜಯನಬಗರ . ಆರೋಪಿತನ ಸ್ವಂತ ಊರು ಸಹ ಚಿಕ್ಕೋಡಿ ತಾಲೂಕಿನ ವಿಜಯನಬಗರ . ನನ್ನದು ಚಿಕ್ಕೋಡಿಯ ಎಕ್ಸಿಸ ಬ್ಯಾಂಕಿನಲ್ಲಿ ಖಾತೆ ಇದೆ. ಅರ್ಬನ ಬ್ಯಾಂಕ , ಬೆಲ್ಲದಬಾಗೆವಾಡಿಯಲ್ಲಿ , ಕೆ ವಿ ಜಿ ಬ್ಯಾಂಕ ಬಾಗೆವಾಡಿಯಲ್ಲಿ ಖಾತೆ ಇದೆ. ನಾನು ಈ ಹಿಂದೆ ಪಾರ್ಟಟೈಮ ಟೀಚರ ಆಗಿ ಕಬ್ಬೂರಿನ ಕೆ ಎಂ ಬೆಲ್ಲದ ಹೈಸ್ಕೂಲನಲ್ಲಿ ಕೆಲಸ ಮಾಡುತ್ತಿದ್ದೆ . ನಾನು ಇನಕ್‌ಮ ಟ್ಯಾಕ್ಸ ಕಟ್ಟುವುದಿಲ್ಲ. ನನ್ನ ಆದಾಯ ಮೂಲಗಳನ್ನು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರ ಮಾಡಲು ತೊಂದರೆ ಇರುವುದಿಲ್ಲ. ನನ್ನ ಎಲ್ಲಾ ಬ್ಯಾಂಕಗಳ ಉಳಿತಾಯ ಖಾತೆಗಳ ಎಕ್ಸಟ್ರ್ಯಾಕ್ಟನ್ನು ನ್ಯಾಯಾಲಯಕ್ಕೆ ಹಾಜರ ಮಾಡುತ್ತೇನೆ. ಸಾಮಾನ್ಯವಾಗಿ ಬ್ಯಾಂಕನವರು ಚಕ್ ಬುಕ ಕೊಟ್ಟಾಗ ಮೊದಲನೆ ಹಾಳೆಯಲ್ಲಿ ಚೆಕ್ ಯಾರಿಗೆ ಕೊಟ್ಟಿದ್ದೇವೆ ಎಂದು ನಮೂದು ಮಾಡಲು ಒಂದು ಹಾಳೆ ಕೊಟ್ಟಿರುತ್ತಾರೆ ಎಂದರೆ ನಿಜ. ಆ ಕೌಂಟರ ಫೈಲ ಮೂಲಕ ಯಾವ ವ್ಯಕ್ತಿಗೆ ಚೆಕ್ ಕೊಟ್ಟಿದ್ದೇವೆ ಎಂದು ಮಾಹಿತಿ ಸಿಗುತ್ತದೆ ಎಂದರೆ ನಿಜ.

2. ಯಾವುದೇ ಬಾಂಡ್ ಬರೆದಾಗ ಅದರ ಮೇಲೆ ಬರೆದಂತಹ ದಿನಾಂಕ ಹಾಕುತ್ತಾರೆ ಎಂದರೆ ನಿಜ. ನಾನು ಹಾಜರ ಮಾಡಿದ ಬಾಂಡ ಮೇಲೆ 27-6-2024 ಎಂದು ದಿನಾಂಕ ನಮೂದು ಇದೆ . ನಾನು ಅದನ್ನು ಸರಿಯಾಗಿ ನೋಡಿ ತಿಳಿದುಕೊಂಡಿರುತ್ತೇನೆ. ಶಂಕರ ಟರಕಿ ಸಾಃ ಕಬ್ಬೂರು ಹಾಗೂ ವಿಜಯ ಆಕಳೆ ಎಂಬುವವರು ಸಹಿ ಮಾಡಿರುತ್ತಾರೆ. ರೈತ ಪಿ ಕೆ ಪಿ ಎಸ್ ಕಬ್ಬೂರು ಎಂದು ಒಂದು ಸೊಸೈಟಿ ಇದೆ ಎಂದರೆ ನಿಜ. ಅಲ್ಲಿ ರೈತರಿಗೆ ಜಾಮೀನು , ಅಡಮಾನ ಸಾಲ ಕೊಡುತ್ತಾರೆ ಎಂದರೆ ನಿಜ. ಶಂಕರ ಟರಕಿ ಆ ರೈತ ಪಿ ಕೆ ಪಿ ಎಸ್ ಕಬ್ಬೂರ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನಿಜ. ಶಂಕರ ಟರಕಿಗೂ ನನಗೂ ಒಳ್ಳೆಯ ಗೆಳೆತನ ಇದೆ. ಆ ಸೊಸೈಟಿಯಲ್ಲಿ ಆರೋಪಿತನು 2020 ರಲ್ಲಿ ವಾಹನದ ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. ದುಡ್ಡು ತುಂಬಿದ ಬಗ್ಗೆ ಸೊಸೈಟಿಯವರು ದುಡ್ಡು ಮುಟ್ಟಿದ ನಂತರ ಸ್ಲಿಪ ಕೊಡುತ್ತಾರೆ ಎಂದರ ನಿಜ.

3. ನಾನು ಈಗ ಆರೋಪಿಯ ಹೆಸರಿನಲ್ಲಿರುವ ರೈತ ಪಿ ಕೆ ಪಿ ಎಸ್ ಕಬ್ಬೂರು ಇವರು ಕೊಟ್ಟಂತಹ ರೂ. 11,500/- ರಸೀದಿ ನೋಡುತ್ತಿದ್ದು ಅದರಲ್ಲಿ 30-9-2023 ಎಂದು ದಿನಾಂಕ ನಮೂದು ಇದೆ ಎಂದರೆ ನಿಜ. ಆ ಕಾಗದದಲ್ಲಿ ಸೊಸೈಟಿಯವರು ಆರೋಪಿಗೆ ಹಣ ಕೊಟ್ಟ ಬಗ್ಗೆ ನಮೂದು ಇದೆ ಎಂದರೆ ನಿಜ. 2020 ರಲ್ಲಿ ಆರೋಪಿ ಅಲ್ಲಿ ವಾಹನ ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. ಐಡಿಬಿಐ ಚೆಕನ್ನು ನಾನು ಈಗ ನೋಡುತ್ತಿದ್ದೇನೆ . ಅದು ಆರೋಪಿತನ ಖಾತೆಗೆ ಸೇರಿದ್ದು ಎಂದರೆ ನಿಜ. ಸದರಿ ಚೆಕ್ ಬುಕ್ಕನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಈ ಕೇಸಿನಲ್ಲಿ ಹಾಕಿದಂತಹ ಚೆಕ್ ನಂ. 46246 ಇರುತ್ತದೆ. ನಿ.ಡಿ-1 ರಲ್ಲಿ 046246 ಚೆಕ್ ನಂಬರ ಇದೆ ಎಂದರೆ ಸಾಕ್ಷಿ ಅದನ್ನು ತಿದ್ದುಪಡಿ ಮಾಡಿರುವುದಾಗಿ ಹೇಳುತ್ತಾರೆ. ಕೌಂಟರಫಾಯಿಲ ಪ್ರಕಾರ 046246 ಚೆಕ್ ದಿನಾಂಕ 25-10-2020 ಕೊಟಿಟದ್ದಾಗಿ ನಮೂದು ಇದೆ ಎಂದರೆ ಸರಿಯಲ್ಲ. ಅದು ಫೇಕ ಇದೆ ಎಂದು ಹೇಳುತ್ತಾರೆ. ಚೆಕ 046246 ಹಾಗೂ 046247 ರೈತ ಪಿ ಕೆ ಪಿ ಎಸ್ ಗೆ ಕೊಟ್ಟಿದ್ದಾಗಿ ನಮಾದು ಇದೆ ಎಂದರೆ ಅದು ಫೇಕ ಇದೆ ಎಂದು ಹೇಳುತ್ತಾರೆ. ರೈತ ಪಿ ಕೆ ಪಿ ಎಸ್ ನವರು ಆರೊಪಿಗೆ ಕ್ಟೊಂತಹ ಸಾಲದ ಬದ್ರತೆಗಾಗಿ ಆ 2 ಚೆಕಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ.

4. ನಾನು ಮತ್ತು ಟರಕಿ ಇವರು ಶಾಮೀಲ ಆಗಿ ಆರೋಪಿ ರೈತ ಪಿ ಕೆ ಪಿ ಎಸ್ ಗೆ ಕೊಟ್ಟ ಚೆಕ್ಕನ್ನು ಈ ಕೇಸಿನಲ್ಲಿ ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಶಂಕರ ಟರಕಿ ಇವರನ್ನು ನನ್ನ ಪರವಾಗಿ ಸಾಕ್ಷಿ ಮಾಡಿಸಬಲ್ಲೆ. ಚೆಕ್ ಮೇಲೆ 30-09-2024 ಎಂದು ದಿನಾಂಕ ನಮೂದು ಇದೆ. ಆರೋಪಿಯು ಪಿ ಕೆ ಪಿ ಎಸ್ ಗೆ ಕೊಟ್ಟ ಚೆಕ್ಕನ್ನು ನಾನು ಈ ಕೇಸಿನಲ್ಲಿ ದುರುದ್ದೇಶದಿಂದ ಹಾಕಿದ್ದೇವೆ ಎಂದರೆ ಸರಿಯಲ್ಲ. ಎಕ್ಸಿಸ ಬ್ಯಾಂಕ ಚಿಕ್ಕೋಡಿ ಶಾಖೆಯಿಂದ ನಾನು ಹಣ ವಿಥಡ್ರಾ ಮಡಿ ಆರೋಪಿಗೆ ಕ್ಯಾಶ್ ಕೊಟ್ಟಿದ್ದೇನೆ.

5. ದಿನಾಂಕ 24-02-2023 ರಂದು ನನ್ನ ಅಕೌಂಟಗೆ 2ನೇ ಬಾರಿ ಖರ್ಚು ಬಿದ್ದಿತ್ತು . ನಾನು ಆರೋಪಿ ಸುಭಾಷ ಚಿಕ್ಕೋಡಿ ಗೆ ರೂ. 4,00,000/- ಗಳ ಒಂದು ಚೆಕ್ ಬರೆದುಕೊಟ್ಟಿದ್ದು ನಾನು ಅದನ್ನು ವಿಥಡ್ರಾ ಮಾಡಿಕೊಂಡು ಬಂದಿದ್ದೆ. ಅದನ್ನು ಆರೋಪಿ ಹೆಸರಿಗೆ ಕೊಟ್ಟಿದ್ದೆ. ಸೆಲ್ಫ ಚೆಕ್ ಕೊಟ್ಟಿರಲಿಲ್ಲ. ಸದರಿ ಚೆಕ್ಕನ್ನು ಆತನೇ ಡ್ರಾ ಮಾಡುವ ಹಾಗೆ ಮಾಡಿದ್ದೆವು. ಈ ಚೆಕ್ಕನ್ನು ಬಿಟ್ಟು ಬೇರೆ ಯಾವುದೇ ಚೆಕ್ಕನ್ನು ಆರೋಪಿಗೆ ಕೊಟ್ಟಿರುವುದಿಲ್ಲ. 20-2-2023 ರಂದು ನಾನು ರೂ. 4,10,000/- ಗಳನ್ನು ಆರೋಗಪಿ ಹಣ ಕೊಡುವ ಸಲುವಾಗಿ ಸೆಲ್ಫ ಚೆಕ್ ನ್ನು ಬರೆದು

ಹಣ ವಿಥಡ್ರಾ ಮಾಡಿ ಕೊಟ್ಟಿದ್ದೇನೆ. 27-06-2024 ರಂದು ರೂ. 2,45,000/- ಹಣ ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಬಲ್ಲೆ.

6. ಆರೋಪಿ ನನ್ನ ಕಡೆಯಿಂದ ರೂ. 4,00,000/- ಮಾತ್ರ 24/2/2023 ರಂದು ನಾನು ಕೊಟ್ಟಂತಹ ಚೆಕ್ ಮೂಲಕ ಪಡದುಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿಯು ನನ್ನ ಕಡೆಯಿಂದ 27-6-2024 ರಂದು ಹಾಗೂ 20-2-2023 ರಂದು ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಐ ಡಿ ಬಿ ಐ ಬ್ಯಾಂಕ , ಧೂಪದಾಳ ಶಾಖೆಯಲ್ಲಿ ಹಾಗೂ ಕೆವಿಜಿ ಬ್ಯಾಂಕ ಜಾಗನೂರ ಶಾಖೆಯಲ್ಲಿ ಹಾಗೂ ಬೆಲ್ಲದ ಬಾಗೆವಾಡಿಯ ಕೆ ವಿ ಜಿ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಕೆವಿಜಿ ಬ್ಯಾಂಕ ಜಾಗನೂರ ಶಾಖೆಯಿಂದ ನನ್ನ ಅಕೌಂಟಗೆ ದಿನಾಂಕ 21-7-2023 ರಂದು ರೂ. 2,00,000/- ಗಳನ್ನು ನನಗೆ ವಾಪಸ ಮಾಡಿದ್ದ ಎಂದರೆ ಸರಿಯಲ್ಲ . ಸಾಕ್ಷಿ ಆ ಬ್ಯಾಂಕಿನಲ್ಲಿ ಆರೋಪಿಯ ತಂದೆಯದು ಸಾಲ ಇತ್ತು , ಆ ಸಾಲ ತುಂಬಲು ನನ್ನ ಕಡೆಯಿಂದ ಕ್ಯಾಶ ಪಡೆದಿದ್ದ , ಆ ಹಣವನ್ನು ಆರೋಪಿ ನನಗೆ ಅಕೌಂಟ ಮೂಲಕ ಹಿಂದಿರುಗಿಸಿದ್ದ ಎಂದು ಹೇಳುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಆದಂತಹ ಆ ವ್ಯವಹಾರದ ಕಾಗದ ಪತ್ರ ತರೆಸುವಲ್ಲಿ ನನಗೆ ಯಾವುದೇ ಅಭ್ಯಂತರ ಇಲ್ಲ.

**(ಆರೋಪಿ ಪರ ವಕೀಲರು ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ